


# ರೂಬಿ ಜಲಪಾತ

## ಭೂಗರ್ಭದ ವಿಸ್ಮಯ

**ಅಮೆರಿಕದ ಚಟನೂಗ ನಗರದಲ್ಲಿರುವ ರೂಬಿ ಎಂಬ ಭೂಗರ್ಭ ಜಲಪಾತ ಪ್ರವಾಸಿಗರ ಆಕರ್ಷಣೆಯ ಕೇಂದ್ರಬಿಂದು. ಜಲಪಾತಕ್ಕೆ ಸಾಗುವ ಹಾದಿಯಲ್ಲಿನ ಸುಣ್ಣದ ಕಲ್ಲಿನ ಶಿಲಾರಚನೆಗಳೂ ಆಕರ್ಷಣೀಯವಾಗಿವೆ.**

■ ಬಿ.ಪಿ. ಶಿವಮೂರ್ತಿ

ನಾವು ಅಮೆರಿಕದ ಅಟ್ಲಾಂಟದಿಂದ 220 ಮೈಲಿ ದೂರವಿರುವ ಚಟನೂಗ ನಗರದಲ್ಲಿನ ರೂಬಿ ಎಂಬ ಜಲಪಾತ ನೋಡಲು ಹೊರಟಿದ್ದೆವು. ಚಟನೂಗ ಇರುವುದು ಅಮೆರಿಕದ ಟೆನೆಸಿ ಎಂಬಲ್ಲಿ. ಜೋಗ, ಗಗನಚುಕ್ಕಿ, ಭರಚುಕ್ಕಿ, ನಯಾಗರ ಮೊದಲಾದ ಪ್ರಸಿದ್ಧ ಜಲಪಾತಗಳನ್ನು ನೋಡಿದ್ದ ನಾನು ಈ ಜಲಪಾತ ಹೇಗಿರಬಹುದೆಂಬ ಕುತೂಹಲದಿಂದಲೇ ಹೊರಟೆ.

ರೂಬಿ ಜಲಪಾತವಿರುವುದು ಲುಕೌಟ್ ಎಂಬ ಪರ್ವತದಲ್ಲಿ. ನಾವು ಕಾರಿನಲ್ಲೇ ಪರ್ವತವೇರಿ ರೂಬಿ ಫಾಲ್ಸ್ ಕ್ಯಾಜಲ್ ಎಂಬ ಹೆಸರಿನ, ಸುಣ್ಣದ ಕಲ್ಲಿನಿಂದಲೇ ಕಟ್ಟಿದ ಸುಂದರ ಕಟ್ಟಡವನ್ನು ತಲುಪಿದೆವು. ಜಲಪಾತ ನೋಡಲು ಇಲ್ಲಿಂದ ಒಂದು ಎಲಿವೇಟರ್‌ನಲ್ಲಿ ಹೋಗಬೇಕಾಗಿತ್ತು. ಅಲ್ಲಿ ಒಂದು ಉಪಾಹಾರ ಮಂದಿರ ಕೂಡ ಇತ್ತು. ಅಲ್ಲೇ ಜಲಪಾತ ನೋಡಲು ಟಿಕೆಟ್ ಕೊಂಡೆವು. ಅವರು 15–20 ಜನಗಳ ಗುಂಪು ಮಾಡಿ ಒಂದೂವರೆ ಗಂಟೆಗೊಂದೊಂದು ಗುಂಪನ್ನು ಜಲಪಾತ ನೋಡಲು ಕಳಿಸುತ್ತಿದ್ದರು. ನಮ್ಮ ಸರದಿ ಬಂದಾಗ, ನಮ್ಮನ್ನು ಗಾಜಿನ ಬಾಗಿಲಿರುವ ಒಂದು ಎಲಿವೇಟರ್‌ನಲ್ಲಿ 260 ಅಡಿ ಕೆಳಕ್ಕೆ ಕರೆದುಕೊಂಡು ಹೋದರು. ಅಲ್ಲಿ ಗೈಡ್ ನಮ್ಮನ್ನು ಒಂದು ಭೂಗರ್ಭ ಗುಹೆಗೆ ಕರೆದುಕೊಂಡು ಹೊರಟಳು.

ಆ ಗುಹೆಯೊಳಗೆ ತುಂಬಾ ಕಿರಿದಾದ ಕಲ್ಲು ಹಾಸಿನ ಹಾದಿಯಿತ್ತು. ಒಂದೆರಡು ಕಡೆ ಜಲಪಾತ ವೀಕ್ಷಿಸಿ ಹಿಂತಿರುಗುತ್ತಿರುವ ಗುಂಪಿನ ಜನಗಳು ಬಂದಾಗ ನಾವು ಪಕ್ಕಕ್ಕೆ ಸರಿದು ನಿಂತು ಅವರಿಗೆ ಹೋಗಲು ಅನುವು ಮಾಡಿಕೊಡಬೇಕಾಯಿತು. ಕತ್ತಲಿನ ಗುಹೆಯಲ್ಲಿ ಬೆಳಕಿಗೋಸ್ಕರ ಅಲ್ಲಲ್ಲಿ ವಿದ್ಯುತ್ ದೀಪಗಳನ್ನು ಹಾಕಿದ್ದರು. ಈ ಗುಹೆ ಸುಣ್ಣದ ಕಲ್ಲಿನಿಂದ ರಚನೆಯಾದ ಜೀವಂತ ಗುಹೆ. ಸುಣ್ಣದ ಕಲ್ಲಿನ ಪದರಗಳಲ್ಲಿ ಈಗಲೂ ನೀರಿನ ಒರತೆಯಿದ್ದು, ಅಲ್ಲಲ್ಲಿ ನೀರಿನ ಹನಿಗಳು ತೊಟ್ಟಿಕ್ಕುತ್ತಿದ್ದವು. ಈ ಗುಹೆಯಲ್ಲಿ ಉಷ್ಣತೆ 15 ಡಿಗ್ರಿ ಸೆಂ. ಇದ್ದು ತಣ್ಣಗಿನ ವಾತಾವರಣವಿತ್ತು. ಈ ಗುಹೆಯ ಎತ್ತರ ಆರರಿಂದ ನೂರು ಅಡಿಯವರೆಗೂ ಇತ್ತು. ಗುಹೆಯ ಉದ್ದಕ್ಕೂ ಎಡಬಲಗಳಲ್ಲಿ ಆನೆಯ ಪಾದ, ಕಂಬಗಳು, ಆಲೂಗೆಡ್ಡೆ ಮೊದಲಾದ ಸುಣ್ಣದ ಕಲ್ಲಿನ ವಿವಿಧ ಶಿಲಾರಚನೆಗಳು ಮೂಡಿದ್ದವು. ಈ ಸುಣ್ಣದ ಕಲ್ಲಿನ ಶಿಲಾರಚನೆಗಳು ಹತ್ತಾರು ವರ್ಷಗಳಲ್ಲಾದವಲ್ಲ.